ಕಿಟಕಿಗಳಿಂದ ಅಥವಾ ಟೆರೇಸಿನ ಮೇಲೆ ಹೋಗಿ, ಈ ಇಬ್ಬರು ಎಳೆಯ ಕಳ್ಳರಿಗೆ ಹಾಕಲಾಗುವ ನೇಣನ್ನು ನೋಡಲು ಉತ್ಸುಕರಾಗಿದ್ದರು. ಇದಾದ ಮೇಲೆ, ಆ ಪಾರ್ಕಿನ ಮುಂದಿರುವ ಮನೆಯ ಹೆಂಗಸೊಬ್ಬಳು ಹೇಳಿದ್ದು ಹೀಗೆ: 'ನಾನು ಕೆಲಸದಿಂದ ವಾಪಸ್ಸಾದಾಗ, ಪಾರ್ಕಿನಲ್ಲಿದ್ದ ಈ ತಡೆಗಟ್ಟನ್ನು ನೋಡಿ ಆಶ್ಚರ್ಯಗೊಂಡೆ. ನಂತರ ನಮ್ಮಮ್ಮ ಹೇಳಿದಳು, ಇದೇ ದಿನ ನಮ್ಮ ಮನೆಯ ಮುಂದೆಯೇ ಇಬ್ಬರನ್ನು ನೇಣಿಗೆ ಏರಿಸಲಾಯಿತಂತೆ. ನನಗೆ ಈ ಸುದ್ದಿಗಳ ಬಗ್ಗೆ ಅಷ್ಟೇನೂ ಆಸ್ಥೆ ಇಲ್ಲವಾದ್ದರಿಂದ, ನಾನು ಇದರ ಬಗ್ಗೆ ಏನೂ ಕೇಳಿಸಿಕೊಂಡಿರಲಿಲ್ಲ. ನನ್ನ ತಂದೆಗೆ ಸ್ವಲ್ಪ ಹೃದಯದ ತೊಂದರೆ ಇದೆ. ಅವರು ಮಾತ್ರ ಸ್ವಲ್ಪ ಉದ್ವೇಗಕ್ಕೊಳಗಾಗಿದ್ದರು. ಅವರು ನನ್ನನ್ನು ಉದ್ದೇಶಿಸಿ – 'ಈ ಪಟ್ಟಣದಲ್ಲಿ ಇರುವ ಜಾಗಗಳನೆಲ್ಲಾ ಬಿಟ್ಟು, ಇಲ್ಲಿ ಯಾಕೆ, ನಮ್ಮ ಮನೆ ಮುಂದೆ ಇದನ್ನು ಮಾಡಬೇಕು? ಇಲ್ಲಿ ಎಲ್ಲರೂ ಅವರವರ ಪಾಡನ್ನು ನೋಡಿಕೊಂಡು ಸುಮ್ಮನೆ ಇದ್ದಾಗ ನಮ್ಮ ಬಡಾವಣೆಯಲ್ಲೇಕೆ ರಗಳೆ? ಆ ಮಕ್ಕಳು ನಮಗೆ ಗೊತ್ತೂ ಇಲ್ಲ' ಎಂದರು.'

ಗಡಿಯಾರದ ಮುಳ್ಳುಗಳು ಐದೂವರೆ ತೋರಿಸಿದ ತಕ್ಷಣ, 'ಒಂದು, ಎರಡು, ಮೂರು' ಎಂದು ಗೊರ ಗೊರ ಎನ್ನುವ ಧ್ವನಿ ಸುತ್ತಲೂ ಆವರಿಸಿದ್ದ ಮೌನವನ್ನು ಭೇದಿಸುತ್ತಾ, ಧ್ವನಿವರ್ಧಕದಲ್ಲಿ ಮೊಳಗಿತು. ಈ ನೇಣನ್ನು ನೋಡಲು ಸುಮಾರು 400 ಜನ ಸೇರಿದ್ದರು. ಅವರನ್ನು ಹದ್ದು ಬಸ್ತಿನಲ್ಲಿಡಲು ಬಂದಿದ್ದ ಪೊಲೀಸರು, ಅವರ ಕೈಗಳನ್ನು ಕಿಸೆಯಲ್ಲಿ ಹಾಕಿ ಸುಮ್ಮನೆ ನೋಡುತ್ತಾ ಇದ್ದರು. ಧ್ವನಿವರ್ಧಕದಲ್ಲಿ ಕೇಳಿದ ಧ್ವನಿಯಿಂದ ಎಚ್ಚೆತ್ತ ಪೊಲೀಸ್ ಅಧಿಕಾರಿ ತನ್ನ ಸಿಬ್ಬಂದಿಗೆ ಜನರನ್ನು ಕಟಕಟೆಯೊಳಗೇ ಇರುವಂತೆ ನೋಡಿಕೊಳ್ಳಲು ಆದೇಶವಿತ್ತ. ಕೆಲವು ನೋಡುಗರಿಗೆ ಪೊಲೀಸರು ಅಡ್ಡ ಬಂದು ಅವರಿಗೆ ಸರಿಯಾಗಿ ಕಾಣುತ್ತಿರಲಿಲ್ಲ. 'ಸರ್, ದಯವಿಟ್ಟು ಈ ಕಡೆ ಬನ್ನಿ. ನೀವು ಈ ತರಹ ನಿಂತಿದ್ದರೆ, ನಮಗೇನೂ ಕಾಣುವುದಿಲ್ಲ, ನಮ್ಮ ಅಮ್ಮನ ಮೇಲಾಣೆ' ಎಂದರು.

ಕೆಲವು ನಿಮಿಷಗಳ ನಂತರ, ಅಲಿ ಮತ್ತು ಅಲಿರೆಝಾ ಅವರನ್ನು ಕರೆತಂದ ವ್ಯಾನ್ ಆ ಕ್ರೇನಿನ ಹತ್ತಿರ ಬಂತು. ಅದರ ಸುತ್ತಲೂ ಕೆಂಪು ದೀಪದ ಕಾರುಗಳು ಮತ್ತು ಸೈರನ್‌ಗಳ ಮೊರೆತ. ಕುರಾನಿನ ಪಠಣ ಧ್ವನಿವರ್ಧಕದಲ್ಲಿ ಗಟ್ಟಿಯಾಗಿ ಮೂಡಿಬಂದಂತೆ ಇಡೀ ವಾತಾವರಣ ಸ್ವಲ್ಪ ಬಿಗಿಯಾಯಿತು. ಪ್ರೇಕ್ಷಕರು ನಿಟ್ಟುಸಿರು ಬಿಟ್ಟು, ತಮ್ಮ ಸಿಗರೇಟಿನ ದೊಡ್ಡ ದಮ್ ಎಳೆದರು; ಕೆಲವರು ತಮ್ಮ ಮೊಬೈಲ್ ಫೋನನ್ನು ಕ್ರೇನಿನ ಕಡೆ ಹಿಡಿದರು. ಅವರೆಲ್ಲರ ಕಣ್ಣುಗಳಲ್ಲಿ ಒತ್ತಡ ಎದ್ದು ಕಾಣುತ್ತಿತ್ತು ಮತ್ತು ಅವರೆಲ್ಲರೂ ಕಾತರದಿಂದ ಅಲಿ ಮತ್ತು ಅಲಿರೆಝಾ ವ್ಯಾನ್‌ನಿಂದ ಹೊರಬರುವುದನ್ನೇ ಕಾಯುತ್ತಿದ್ದರು. ಕುರಾನಿನ ಪಠಣ ಕೊನೆ ಹಂತಕ್ಕೆ ಬರುತ್ತಿದ್ದಂತೆ, ಇಬ್ಬರು ಯುವಕರನ್ನೂ ಕ್ರೇನಿನ ಬುಡಕ್ಕೆ ತಂದು ನಿಲ್ಲಿಸಲಾಯಿತು ಮತ್ತು ಅವರ ಕತ್ತಿನ ಸುತ್ತ ನೇಣಿನ ಹಗ್ಗವನ್ನು ಇಳಿಬಿಡಲಾಯಿತು. ನೇಣಿನ ಇನ್ನೊಂದು ತುದಿ, ಕ್ರೇನಿನ ಕೊಂಡಿಗೆ ಸಿಕ್ಕಿಸಲಾಗಿತ್ತು. ಎಲ್ಲರ ಅಳು, ಆಕ್ರಂದನ ಸುತ್ತಲಿನ ಪರಿಸರವನ್ನೆಲ್ಲಾ ಆವರಿಸಿತು.

ಅಲಿ ಮತ್ತು ಅಲಿರೆಝಾನ ಹಲವು ಗೆಳೆಯರು ಅವರ ಹೆಸರುಗಳನ್ನು ಗಟ್ಟಿಯಾಗಿ ಕೂಗುತ್ತಿದ್ದರು. ಹೆಂಗಸರ ಅಳು ಮುಗಿಲು ಮುಟ್ಟಿತು. ಹಲವರು ಭಾವಿಸಿದಂತೆ, ಅದು ಅಪರಾಧಿಗಳ ಅಮ್ಮಂದಿರ ಮತ್ತು ಅಕ್ಕ ತಂಗಿಯರ ಆಕ್ರಂದನವಾಗಿದ್ದಿರಲೂಬಹುದು. ಜನರ ಗದ್ದಲ ಜೋರಾದಂತೆ, ಪೊಲೀಸರು ತಮ್ಮ ಲಾಠಿಗಳಿಂದ ಕಬ್ಬಿಣದ ತಡೆಗಟ್ಟುಗಳನ್ನು ಹೊಡೆಯುತ್ತಾ ಜನರಿಗೆ ಶಾಂತಿಯಿಂದಿರಲು ಹೇಳುತ್ತಿದ್ದರು. ಇದೆಲ್ಲ ನಡೆಯುತ್ತಿದ್ದಂತೆ ಅಲಿ ನೀರು ಬೇಕೆಂದು ಹೇಳಿದ; ಅಲಿರೆಝಾ ತನ್ನ ತಲೆಯನ್ನು ಅವನನ್ನು ಕರೆತರುತ್ತಿದ್ದ ಆಫೀಸರನ ಭುಜಕ್ಕೆ ಒರಗಿಸಿದ. ನ್ಯಾಯಾಲದಿಂದ ಬಂದ ಒಬ್ಬ ಪಬ್ಲಿಕ್ ಪ್ರಾಸಿಕ್ಯೂಟರ್ ಒಬ್ಬ ತೀರ್ಪನ್ನು ಓದಿ ಹೇಳಿದ ಮತ್ತು ಕ್ರೇನಿನ ಕೊಂಡಿಯನ್ನು ಮೇಲೆತ್ತಲು ಆಜ್ಞಾಪಿಸಿದ. ಅಲ್ಲಿಗೆ ಅವರಿಬ್ಬರ ದೇಹಗಳು ಸಾವಿನೊಡನೆ